# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು

## *:*:* ಅಧಿಸೂಚನೆ *:*:*

ಸಂ. ನಅಪ್ರಾಚಿ : ನಿ.ಹಂಚಿಕೆ : 2012-13, ದಿನಾಂಕ: 28-01-2013.

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ, ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಗೆ ಸೇರಿದ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿಧ ಸ.ನಂ. ಗಳ 193.19 ಎಕರೆ ಪ್ರದೇಶದಲ್ಲಿ ಶ್ರೀ ಎ.ಬಿ. ವಾಜಪೇಯಿ ವಸತಿ ಬಡಾವಣೆಯನ್ನು 40 : 60 ವಸತಿ ಯೋಜನೆಯಡಿ ರೈತರ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಸದ್ಯದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಬಡಾವಣೆಯನ್ನು ಹೈಟೆಕ್ ಮೂಲಭೂತ ಸೌಕರ್ಯಗಳೊಂದಿಗೆ ಕರ್ನಾಟಕ ರಾಜ್ಯದಲ್ಲಿಯೇ ಅತ್ಯುತ್ತಮ ವಸತಿ ಬಡಾವಣೆಯನ್ನಾಗಿ ಅಭಿವೃದ್ಧಿಪಡಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಯೋಜನೆ ಮಾರ್ಗಸೂಚಿಯಂತೆ ಸದರಿ ಬಡಾವಣೆಯಲ್ಲಿ ಪ್ರಾಧಿಕಾರದ ಪಾಲಿಗೆ ಬರುವ ಶೇ.60 ರಷ್ಟು ವಿವಿಧ ಅಳತೆಯ ನಿವೇಶನಗಳ ಪೈಕಿ ಹಂಚಿಕೆಗೆ ಲಭ್ಯವಾಗುವ ನಿವೇಶನಗಳನ್ನು ನಿಯಮಾವಳಿಗಳಂತೆ ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

## *:*:* ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ವಿವರಗಳು *:*:*

| | | | | | | |
|---|---|---|---|---|---|---|
| 1 | ನಿವೇಶನದ ಅಳತೆ ಮೀಟರ್ ಗಳಲ್ಲಿ | 15 x 24 | 12x18 | 9 x 15 | 9x12 | 6 x 9 |
| 1a | ನಿವೇಶನದ ಅಳತೆ ಅಡಿಗಳಲ್ಲಿ | 50 x 80 | 40 x 60 | 30 x 50 | 30 x 40 | 20 x 30 |
| 2 | ನಿವೇಶನಗಳ ಸಂಖ್ಯೆ | 19 | 180 | 302 | 695 | 380 |
| 3 | ನೊಂದಣಿ ಶುಲ್ಕ ರೂ. | 2000-00 | 500-00 | 500-00 | 500-00 | 100-00 |
| 4 | ದರ ಚ.ಮೀ ಒಂದಕ್ಕೆ ರೂ. ಅಂದಾಜು | 7532 -00 | 7532-00 | 7532-00 | 7532-00 | 7532-00 |
| 4a | ದರ ಚ.ಅಡಿ ಒಂದಕ್ಕೆ ರೂ. ಅಂದಾಜು | 700-00 | 700-00 | 700-00 | 700-00 | 700-00 |
| 5 | ನಿವೇಶನ ಅಂದಾಜು ಮೌಲ್ಯ ( ಲಕ್ಷಗಳಲ್ಲಿ ) | 28.00 | 16.80 | 10.50 | 8.40 | 4.20 |
| 6 | **ಅರ್ಜಿಯೊಂದಿಗೆ ಪ್ರಾರಂಭಿಕ ಠೇವಣಿ ಹಣ** | | | | | |
| | ಪ.ಜಾ/ ಪ.ಪಂ./ ಹಿ.ಪಂ/ ಸೈನಿಕ / ಮೃತ ಸೈನಿಕ / ಮೃತ ಸೈನಿಕ ಕುಟುಂಬದ ಸದಸ್ಯರು ಮತ್ತು ಕೇಂದ್ರ ಸಶಸ್ತ್ರ ಸೈನಿಕರು ನಿವೇಶನದ ಮೌಲ್ಯದ ಶೇ. 3 ರಷ್ಟು ಲಕ್ಷಗಳು | 0.84 | 0.50 | 0.32 | 0.25 | - |
| | ಇತರರಿಗೆ ನಿವೇಶನ ಮೌಲ್ಯದ ಶೇ. 10 ರಷ್ಟು ( ಲಕ್ಷಗಳಲ್ಲಿ ) | 2.80 | 1.68 | 1.05 | 0.84 | 0.21 (50 %) |

## ::: ಷರತ್ತುಗಳು :::

1. ಈ ಹಿಂದೆ ನೊಂದಣಿ ಶುಲ್ಕವನ್ನು ಪಾವತಿಸಿ ನೊಂದಣಿ ಮಾಡಿಸಿರುವವರು ಪುನಃ ನೊಂದಣಿ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ಆದರೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕು. ನೊಂದಣಿ ಮಾಡಿಸದೇ ಇರುವವರು ಕಡ್ಡಾಯವಾಗಿ ನೊಂದಣಿ ಮಾಡಿಸಿ ಅರ್ಜಿ ಸಲ್ಲಿಸಬೇಕು.
2. ಅರ್ಜಿದಾರರು, ಆಕ್ಸಿಸ್ ಬ್ಯಾಂಕ್ ಚಿಕ್ಕಮಗಳೂರು, ಇಂಡಿಯನ್ ಬ್ಯಾಂಕ್ ಚಿಕ್ಕಮಗಳೂರು, ಐ.ಎನ್.ಜಿ. ವೈಶ್ಯ ಬ್ಯಾಂಕ್, ಚಿಕ್ಕಮಗಳೂರು ಮತ್ತು ಡಿ.ಸಿ.ಸಿ ಬ್ಯಾಂಕ್ ಪ್ರಧಾನ ಕಛೇರಿ ಶಾಖೆ ಚಿಕ್ಕಮಗಳೂರು ಇವರಲ್ಲಿ ಅಗತ್ಯ ಶುಲ್ಕವನ್ನು ಪಾವತಿ ಮಾಡಿ ನಿಗಧಿತ ಖಾಲಿ ಅರ್ಜಿ ಫಾರಂ ಪಡೆದುಕೊಳ್ಳಬಹುದು. ಅರ್ಜಿ ಫಾರಂ ಜೊತೆಯಲ್ಲಿ ನೊಂದಣಿ ಶುಲ್ಕವನ್ನು ಪಾವತಿಸಲು ಫಾರಂ ನಂ-1 ನ್ನು ಲಗತ್ತಿಸಿದ್ದು, ಅದರ ಒಂದು ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸಬೇಕು. **( ಅರ್ಜಿ ಶುಲ್ಕ ರೂ.200 /-, ಪ.ಜಾ/ ಪ.ಪಂ/ ಹಿಂದುಳಿದ ಪಂಗಡ / ಅ.ಹಿ.ವರ್ಗದವರಿಗೆ ಅರ್ಜಿ ಶುಲ್ಕ ರೂ.100 /- ಮಾತ್ರ.)** ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಖಾಲಿ ಅರ್ಜಿ ಫಾರಂಗಳನ್ನು ಕೊಡಲಾಗುವುದಿಲ್ಲ.

ಪುಟ 2 ಕ್ಕೆ

3. ಅರ್ಜಿದಾರರು ಆಸಕ್ತಿ ಹೊಂದಿದ ನಿವೇಶನದ ವಿಸ್ತೀರ್ಣಕ್ಕೆ ಅನುಸಾರವಾಗಿ ಪಾವತಿ ಮಾಡಬೇಕಾಗಿರುವ ಆಗತ್ಯವಾದ ಪ್ರಾರಂಭಿಕ ಠೇವಣಿಯನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು ಇವರ ಹೆಸರಿಗೆ ಕ್ರಾಸ್ ಮಾಡಲ್ಪಟ್ಟ ಡಿಮ್ಯಾಂಡ್ ಡ್ರಾಫ್ಟ್ / ಪೇ ಆರ್ಡರ್ ಪಡೆದುಕೊಂಡು ಅರ್ಜಿಯ ಜೊತೆ ಸಲ್ಲಿಸಬೇಕು.

4. ಅ) ಅರ್ಜಿದಾರರು ಈ ಪ್ರಕಟಣೆಯ ರೀತ್ಯಾ ಈ ಹಿಂದೆ ಅರ್ಜಿ ಸಲ್ಲಿಸಿದ ನಿವೇಶನ ಅಳತೆಗಿಂತ ಹೆಚ್ಚಿನ ಅಳತೆಯ ನಿವೇಶನಕ್ಕೆ ಅರ್ಜಿ ಸಲ್ಲಿಸ ಬಯಸಿದರೆ ಹೆಚ್ಚಿನ ಅಳತೆಗೆ ನಿಗಧಿಪಡಿಸಿರುವ ನೋಂದಣಿ ಶುಲ್ಕವನ್ನು ಪುನಃ ಪಾವತಿಸತಕ್ಕದ್ದು.

   ಆ) ಈಗಾಗಲೇ ದೊಡ್ಡ ಅಳತೆ ನಿವೇಶನಕ್ಕೆ ನೊಂದಾಯಿಸಿಕೊಂಡಿರುವವರು ಈ ಬಾರಿ ಸಣ್ಣ ಅಳತೆಯ ನಿವೇಶನಕ್ಕೆ ಅರ್ಜಿ ಸಲ್ಲಿಸಬಹುದು. ಅಂತಹವರು ಪುನಃ ನೊಂದಾಯಿಸಬೇಕಾಗಿಲ್ಲ.

5. ಈ ಪ್ರಕಟಣೆಯಲ್ಲಿ ಪ್ರಸ್ತಾವಿತ ಶ್ರೀ ಎ.ಬಿ. ವಾಜಪೇಯಿ ವಸತಿ ಬಡಾವಣೆಯಲ್ಲಿ ನಿವೇಶನಗಳ ಹಂಚಿಕೆಯ ಬಗ್ಗೆ ಮಾತ್ರ ನಿರ್ದಿಷ್ಟವಾಗಿ ತಿಳಿಸಲ್ಪಟ್ಟಿರುತ್ತದೆ.

6. ಆರ್ಥಿಕವಾಗಿ ಹಿಂದುಳಿದವರಿಗೆ (EWS) 6 x 9 ( 20' x 30' ) ಮೀ ಅಳತೆಯ ನಿವೇಶನಗಳನ್ನು ಶೇ. 50 ರಷ್ಟು ರಿಯಾಯಿತಿಯಲ್ಲಿ ಹಂಚಿಕೆ ಮಾಡಲಾಗುವುದು.

7. ಅಪೂರ್ಣವಾದ ಮತ್ತು ಸಹಿ ಹಾಕದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

## ::: ವಿಶೇಷ ಸೂಚನೆ :::

1. ಈಗಾಗಲೇ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅವರು ಮರಣ ಹೊಂದಿದರೆ ಅವರ ಕುಟುಂಬದಿಂದ ಅಧಿಕೃತವಾಗಿ ಒಪ್ಪಿಗೆ ಪಡೆದಿರುವ ಒಬ್ಬರು ವಾರಸುದಾರರು ಮಾತ್ರ ಅರ್ಜಿ ಸಲ್ಲಿಸಬಹುದು ಅರ್ಜಿ ಸಲ್ಲಿಸುವಾಗ ಮೂಲ ದಾಖಲೆಗಳಾದ ತಹಶೀಲ್ದಾರ್ ರವರಿಂದ ಪಡೆದಿರುವ ಜೀವಂತ ಕುಟುಂಬ ಸದಸ್ಯರ ದೃಢೀಕರಣ ಪತ್ರ, ವಂಶವೃಕ್ಷ, ಮರಣ ಸಮರ್ಥನಾ ಪತ್ರ ಹಾಗೂ ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಪಡೆದಿರುವ ಬಗ್ಗೆ ರೂ. 100-00 ಛಾಪಾ ಕಾಗದದಲ್ಲಿ ನೋಟರಿಯವರ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.
2. ಬಡಾವಣೆಯ ಅಭಿವೃದ್ಧಿಗೆ ಬೇಕಾಗುವ ಅನುದಾನವನ್ನು, ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ಮಾತ್ರ ಕ್ರೂಢೀಕರಿಸಿಕೊಳ್ಳಬೇಕಾಗಿರುವುದರಿಂದ, ಬಡಾವಣೆ ಅಭಿವೃದ್ಧಿಗೆ ತಗುಲುವ ವೆಚ್ಚವನ್ನಾಧರಿಸಿ ನಿವೇಶನದ ಬೆಲೆಯನ್ನು ನಿಗಧಿಪಡಿಸಲಾಗಿದೆ.
3. ಪ್ರಸ್ತಾವಿತ ವಸತಿ ಬಡಾವಣೆಯನ್ನು ಹೈಟೆಕ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವುದರಿಂದ ಬಡಾವಣೆ ಅಭಿವೃದ್ಧಿಪೂರ್ಣಗೊಂಡ ನಂತರ ನಿವೇಶನದ ಬೆಲೆಯನ್ನು ನಿಖರವಾಗಿ ನಿಗಧಿಪಡಿಸಲಾಗುವುದು. ಆದ್ದರಿಂದ ನಿವೇಶನಗಳ ಹಂಚಿಕೆಯನ್ನು ಪಡೆದವರು ವ್ಯತ್ಯಾಸದ ಹಣವನ್ನು ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತಾರೆ.
4. ಭೂ ಮಾಲೀಕರಿಗೆ ಅವರ ಪಾಲಿನ ಶೇ. 40 ರಷ್ಟು ನಿವೇಶನ ಜಾಗ ನೀಡುವಾಗ ಅವರು ಅಪೇಕ್ಷಿಸುವ ಅಳತೆಯ ನಿವೇಶನವನ್ನು ನೀಡಬೇಕಾಗಿರುವುದರಿಂದ ಈ ಅಧಿಸೂಚನೆಯಲ್ಲಿ ಹಂಚಿಕೆಗೆ ನಿರ್ದಿಷ್ಟಪಡಿಸಲಾಗಿರುವ ನಿವೇಶನಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗಬಹುದಾಗಿರುತ್ತದೆ.

**:ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 - 02 - 2013 ರ ಬ್ಯಾಂಕ್ ಕೆಲಸದ ವೇಳೆಯ ವರೆಗೆ :**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.